## ಪದ್ಯ ೫ . ಹಸುರು – ಕುವೆಂಪು

### ಕೃತಿಕಾರರ ಪರಿಚಯ :

ಕುವೆಂಪು ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪನವರು ಮಲೆನಾಡ ಮಡಿಲಾದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಸಮೀಪದ ಕುಪ್ಪಳಿಯಲ್ಲಿ ೧೯೦೪ ಡಿಸೆಂಬರ್ ೨೯ ರಲ್ಲಿ ಜನಿಸಿದರು. ಇವರು ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ , ಪಕ್ಷಿಕಾಶಿ ಮೊದಲಾದ ಕವನಸಂಕಲನಗಳನ್ನು ,ನನ್ನ ದೇವರುಮತ್ತು ಇತರ ಕಥೆಗಳು ,ಸಂನ್ಯಾಸಿ ಮತ್ತು ಇತರ ಕಥೆಗಳು –ಕಥಾ ಸಂಕಲನಗಳನ್ನು ,ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಮೊದಲಾದ ಕಾದಂಬರಿಗಳನ್ನು ,ತಪೋನಂದನ, ರಸೋವೈಸಃ ಮೊದಲಾದ ವಿಮರ್ಶಾ ಸಂಕಲನಗಳನ್ನು ಬರೆದಿದ್ದಾರೆ. ನೆನಪಿನ ದೋಣಿಯಲ್ಲಿ ಎನ್ನುವುದು ಇವರ ಆತ್ಮಕಥನವಾಗಿದೆ. ಇವರಿಗೆ ಶ್ರೀರಾಮಾಯಣ ದರ್ಶನಂ ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮತ್ತು ೧೯೬೮ ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಅಷ್ಟೇ ಅಲ್ಲದೆ ಇವರು ರಾಷ್ಟ್ರಕವಿ, ಪಂಪಪ್ರಶಸ್ತಿ ,ಪದ್ಮವಿಭೂಷಣ ,ಮೈಸೂರು,ಬೆಂಗಳೂರು ಮತ್ತು ಗುಲ್ಬರ್ಗ ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್ ಪ್ರಶಸ್ತಿಗಳನ್ನೂ ಪಡೆದಿದ್ದಾರೆ. ಪ್ರಸ್ತುತ ಪದ್ಯಭಾಗವನ್ನು ಇವರ ಪಕ್ಷಿಕಾಶಿ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

### ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ.

೧. ಅಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ?

ಉ : ಅಶ್ವಯುಜದ ಬತ್ತದ ಗದ್ದೆಯ ಬಣ್ಣ ಗಿಳಿಯ ಹಸುರು ಬಣ್ಣದಂತಿದೆ .

೨. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ ?

ಉ: ಕವಿಯು ನೋಡಿದ ಅಡಕೆಯ ತೋಟ ಬನದ ಅಂಚಿನಲ್ಲಿದೆ.

೩. ಹಸುರು ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ ?

ಉ: ಹಸುರು ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ.

೪. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ ?

ಉ:ಕವಿಗೆ ಹುಲ್ಲಿನ ಹಾಸು ಮಕಮಲ್ಲಿನ ಪೊಸಪಚ್ಚೆಯ ಜಮಖಾನೆಯ ರೀತಿ ಕಂಡಿದೆ.

### ಮೂರು– ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ ?

ಉ:ಕವಿಗೆ ನವರಾತ್ರಿಯ ಸಮಯದಲ್ಲಿ ಭೂಮಿ ನವಧಾತ್ರಿಯೆನಿಸುತ್ತಿದೆ. ಹಸಿರಿನ ಕಡಲಿನಲ್ಲಿ ಕವಿಯ ಆತ್ಮವು ಮಿಂದು ರಸಪಾನ ಸ್ನಾನದಿಂದ ಹಸುರಾಗುತ್ತದೆ. ಆಕಾಶ , ಗದ್ದೆ ಬಯಲು,ಮಲೆ,ಕಣಿವೆ ,ಸಂಜೆಯ ಬಿಸಿಲು ಕೂಡ ಕವಿಗೆ ಹಸುರಾಗಿ ಕಾಣುತ್ತದೆ.

೨. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ ?
ಉ: ಹಸುರು ಎನ್ನುವ ಪದವು ಮತ್ತೆ ಮತ್ತೆ ಕವನದಲ್ಲಿ ಆವೃತ್ತವಾಗಿ ಜಪಿಸಲ್ಪಟ್ಟು ಹಸುರಿನ ವಾತಾವರಣ ಸೃಷ್ಟಿಯಾಗುತ್ತದೆ. ಎತ್ತೆತ್ತಲೂ ಹಸುರು, ಆಗಸದಿಂದ ಹಿಡಿದು ಭೂಮಿಯಲ್ಲಿ ಗದ್ದೆಯ ಬಯಲು,ಬೆಟ್ಟ,ಕಣಿವೆ ಸಂಜೆಯ ಬಿಸಿಲು ಎಲ್ಲವೂ ಹಸುರು. ಹೂವಿನ ಕಂಪಿನ ಹಸುರಾಗಿ ,ಗಾಳಿಯ ತಂಪಿನ ಹಸುರಾಗಿ , ಹಕ್ಕಿಯ ಕೊರಲಿಂಪಿನ ಹಸುರಾಗಿ ,ಇಳೆಯ ಉಸಿರಿನ ಹಸುರಾಗಿ ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿ ವರ್ಣಿಸಿದ್ದಾರೆ.

೩. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು ?
ಉ: ನವರಾತ್ರಿಯ ನವಧಾತ್ರಿಯಲ್ಲಿ ಕವಿಯ ಆತ್ಮವು ಹಸುರಿನ ಕಡಲಲ್ಲಿ ಮಿಂದು ರಸಪಾನ ಸ್ನಾನದಿಂದ ಹಸುರಾಗುತ್ತದೆ. ಮಲೆನಾಡಿನ ತುಂಬ ತುಂಬಿದ ಹಸುರು,ಹಬ್ಬಿದ ಹಸುರು ಹಸುರ್ಗಡಲನ್ನು ಸೃಷ್ಟಿಸಿದೆ. ಗದ್ದೆ ಬಯಲು,ಮಲೆ,ಕಣಿವೆ ಇರಲಿ ಸಂಜೆಯ ಬಿಸಿಲೂ ಕೂಡ ಕವಿಗೆ ಹಸುರಾಗಿಯೇ ಕಾಣುತ್ತದೆ. ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಗಿಳಿ ಹಸುರಿನಂತಿದೆ ಹುಲ್ಲು ಹಾಸು ಪಚ್ಚೆಯ ಜಮಖಾನೆಯಂತಿದೆ. ಬೇರೆ ಬಣ್ಣವೇ ಕಾಣದಂತೆ ಭೂಮಿಯನ್ನು ಎಲ್ಲೆಲ್ಲೂ ಆವರಿಸಿರುವ ಹಸುರು ಶಬ್ದ,ಸ್ಪರ್ಷ ಗಂಧಾದಿಗಳನ್ನೂ ವ್ಯಾಪಿಸುತ್ತದೆ.ಇವೆಲ್ಲ ನೋಡಿದ ತಾದಾತ್ಮ್ಯಹೊಂದಿದ ಕವಿಯ ಆತ್ಮವೇ ಹಸುರುಗಟ್ಟುತ್ತದೆ.

## ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. 'ಹಸುರು ' ಕವನದ ರೀತ್ಯ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ.
ಉ : ಹಸುರು ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ್ದ ಹಚ್ಚಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ. ಇದು ಕುವೆಂಪು ಅವರ ಸ್ಥಳವಾದ ಮಲೆನಾಡಿನ ಕುಪ್ಪಳಿಯ ಕವಿಶೈಲದಲ್ಲಿ ಅವರಿಗುಂಟಾದ ಸೌಂದರ್ಯಾನುಭವ ,ಪ್ರಕೃತಿ ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧವನ್ನು ತೋರಿಸುತ್ತದೆ.

ನವರಾತ್ರಿಯ ಸಮಯ ಭೂಮಿ ನವಧಾತ್ರಿಯಾಗುತ್ತದೆ. ಅಷ್ಟೇ ಅಲ್ಲ ಹಸುರಿನ ಕಡಲಲ್ಲಿ ಕವಿಯ ಆತ್ಮವು ರಸಪಾನ ಸ್ನಾನದಿಂದ ಹಸುರಾಗುತ್ತದೆ. ಮಲೆನಾಡಿನ ಭರ್ತಿ ತುಂಬಿದ ಹಸುರು ,ಹಬ್ಬಿದ ಹಸುರು, ಹಸುರ್ಗಡಲನ್ನು ಸೃಷ್ಟಿಸಿದೆ. ಗದ್ದೆ ,ಬಯಲು, ಮಲೆ,ಕಣಿವೆ ಇರಲಿ ಸಂಜೆ ಬಿಸಿಲು ಕೂಡ ಕವಿಗೆ ಹಸಿರಾಗಿ ಕಾಣುತ್ತದೆ. ಆಶ್ವಯುಜದ ಗದ್ದೆಯ ಬಣ್ಣ ಗಿಳಿ ಹಸುರಿನಂತಿದೆ. ಹುಲ್ಲು ಹಾಸು ಪಚ್ಚೆಯ ಜಮಖಾನೆಯಂತಿದೆ. ಅದು ಬೇರೆ ಬಣ್ಣವೇ ಕಾಣದಂತೆ ಹರಡಿಕೊಂಡು ಭೂಮಿಯನ್ನು ಮುಚ್ಚಿದೆ. ಎತ್ತೆತ್ತಲೂ ಹಸುರು, ಹೂವಿನ ಕಂಪಿನ ಹಸುರಾಗಿ, ಗಾಳಿಯ ತಂಪಿನ ಹಸುರಾಗಿ ಹಕ್ಕಿಯ ಕೊರಲಿಂಪಿನ ಹಸುರಾಗಿ ,ಇಳೆಯ ಉಸಿರಿನ ಹಸುರಾಗಿ ಸಕಲೇಂದ್ರಿಯಗಳನ್ನೂ ವ್ಯಾಪಿಸುತ್ತದೆ. ಬರುಬರುತ್ತ ಒಡಲು ಹಸುರಾಗಿ, ಹರಿವ ನೆತ್ತರು ಹಸುರಾಗಿ ,ಆತ್ಮವೂ ಹಸಿರುಗಟ್ಟುತ್ತದೆ. ಅಪೂರ್ವವಾದ ಅನುಭವವನ್ನು ,ಕವಿಯು ಹಸುರಿನಲ್ಲಿ ತಲ್ಲೀನರಾಗಿರುವುದನ್ನು ಈ ಕವನದ ಮುಖಾಂತರ ಗುರುತಿಸಬಹುದಾಗಿದೆ.

೨. ಪ್ರಕೃತಿಯ 'ಹಸುರು ' ಜೀವ ಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.
ಉ: **ಆಹಾರ**: ನಾವು ತಿನ್ನುವ ಎಲ್ಲವು ನೇರವಾಗಿ ಅಥವಾ ಪರೋಕ್ಷವಾಗಿ ಸಸ್ಯಗಳಿಂದ ಬರುತ್ತದೆ. ಮಾನವ ಇತಿಹಾಸದುದ್ದಕ್ಕೂ ಸುಮಾರು 7,000 ವಿಭಿನ್ನ ಸಸ್ಯ ಜಾತಿಗಳನ್ನು ಜನರು ಆಹಾರವಾಗಿ ಬಳಸುತ್ತಾರೆ.
**ವಾಯು**: ದ್ಯುತಿಸಂಶ್ಲೇಷಣೆಯ ಉಪಉತ್ಪನ್ನವಾಗಿ ಸಸ್ಯಗಳಿಂದ ಆಮ್ಲಜನಕವನ್ನು ತರಲಾಗುತ್ತದೆ.
ನೀರು: ಸಸ್ಯಗಳು ನೀರಿನ ಚಕ್ರವನ್ನು ನಿಯಂತ್ರಿಸುತ್ತವೆ ಅವು ಗ್ರಹದ ನೀರನ್ನು ವಿತರಿಸಲು ಮತ್ತು ಶುದ್ಧೀಕರಿಸಲು ಸಹಾಯ

ಮಾಡುತ್ತದೆ. ಅವರು ಮಣ್ಣಿನಿಂದ ವಾತಾವರಣಕ್ಕೆ ವಾತಾವರಣವನ್ನು ಸಾಗಿಸಲು ಸಹ ಸಹಾಯ ಮಾಡುತ್ತದೆ.

ಆವಾಸಸ್ಥಾನ: ಸಹಜವಾಗಿ, ಮನುಷ್ಯರ ಅಸಂಖ್ಯಾತ ಬಳಕೆಗಳಿಂದ, ಸಸ್ಯಗಳು ಎಲ್ಲಾ ಆವಾಸಸ್ಥಾನಗಳ ಬೆನ್ನೆಲುಬಾಗಿವೆ. ಇತರ ಪ್ರಾಣಿಗಳ ಮೀನು ಮತ್ತು ವನ್ಯಜೀವಿಗಳು ಆಹಾರ ಮತ್ತು ಆಶ್ರಯಕ್ಕಾಗಿ ಸಸ್ಯಗಳನ್ನು ಅವಲಂಬಿಸಿವೆ

ಮೆಡಿಸಿನ್: ಎಲ್ಲಾ ಪ್ರಿಸ್ಕ್ರಿಪ್ಷನ್ ಔಷಧಿಗಳಲ್ಲಿ ಒಂದು ಭಾಗವು ನೇರವಾಗಿ ಬರುತ್ತವೆ ಅಥವಾ ಸಸ್ಯಗಳ ಉತ್ಪನ್ನಗಳಾಗಿವೆ. ಹೆಚ್ಚುವರಿಯಾಗಿ, ವಿಶ್ವಾದ್ಯಂತ ಐದು ಜನರಿಗೆ ನಾಲ್ಕು ಪ್ರಾಥಮಿಕ ಆರೋಗ್ಯ ರಕ್ಷಣೆಗಾಗಿ ಸಸ್ಯಗಳ ಮೇಲೆ ಅವಲಂಬಿತವಾಗಿದೆ.

ಹವಾಮಾನ: ಸಸ್ಯಗಳು ಇಂಗಾಲವನ್ನು ಸಂಗ್ರಹಿಸುತ್ತವೆ, ಮತ್ತು ಪಳೆಯುಳಿಕೆ ಇಂಧನಗಳ ವಾತಾವರಣದಿಂದ ಹೊರಬರುವ ಕಾರ್ಬನ್ ಡೈಆಕ್ಸೈಡ್ ಹೆಚ್ಚಿನ ಭಾಗವನ್ನು ಉಳಿಸಿಕೊಳ್ಳಲು ಸಹಾಯ ಮಾಡಿದೆ.

ಪ್ರಕೃತಿಯ ಸಮತೋಲನ ಮತ್ತು ಜನರ ಜೀವನದಲ್ಲಿ ಹಸುರು ಅಂದರೆ ಸಸ್ಯಗಳು ಅತ್ಯಗತ್ಯ. . ಸಸ್ಯಗಳು ತಮ್ಮ ಆಹಾರವನ್ನು ತಯಾರಿಸಲು ಅಸಾಧ್ಯವಾದ ಎಲ್ಲಾ ಪ್ರಾಣಿಗಳಿಗೆ ಆಹಾರ ಮತ್ತು ಚಯಾಪಚಯ ಶಕ್ತಿಯ ಅಂತಿಮ ಮೂಲವಾಗಿದೆ. ಆಹಾರಗಳನ್ನು ಹೊರತುಪಡಿಸಿ (ಉದಾ., ಧಾನ್ಯಗಳು, ಹಣ್ಣುಗಳು ಮತ್ತು ತರಕಾರಿಗಳು), ಮಾನವರಿಗೆ ಸಸ್ಯಗಳ ಉತ್ಪನ್ನಗಳು ಮುಖ್ಯವಾಗಿ ಮರದ ಮತ್ತು ಮರದ ಉತ್ಪನ್ನಗಳು, ಫೈಬರ್ಗಳು, ಔಷಧಿಗಳು, ತೈಲಗಳು, ಲ್ಯಾಟೆಕ್ಸ್, ವರ್ಣದ್ರವ್ಯಗಳು ಮತ್ತು ರೆಸಿನ್ಗಳು. ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಸಸ್ಯ ಮೂಲದ ಪಳೆಯುಳಿಕೆ ವಸ್ತುಗಳು. ಆದರೆ ಆಶ್ರಯ, ಬಟ್ಟೆ, ಔಷಧಿಗಳು, ಇಂಧನಗಳು ಮತ್ತು ಇತರ ಉತ್ಪನ್ನಗಳನ್ನು ತಯಾರಿಸಲಾಗಿರುವ ಕಚ್ಚಾ ಸಾಮಗ್ರಿಗಳನ್ನು ಒದಗಿಸುತ್ತವೆ. ಸಸ್ಯಗಳು ಸೂರ್ಯನ ಶಕ್ತಿಯನ್ನು ಆಹಾರವಾಗಿ ಪರಿವರ್ತಿಸಲು ಸಾಧ್ಯವಾಗುವ ಏಕೈಕ ವಸ್ತುಗಳಾಗಿವೆ .

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

೧. " ಹಸುರಾದುದು ಕವಿಯಾತ್ಮಂ "

ಉ: ಈ ಮೇಲಿನ ವಾಕ್ಯವನ್ನು ಕುವೆಂಪುರವರು ಬರೆದ ಪಕ್ಷಿಕಾಶಿ ಕವನ ಸಂಕಲನದಿಂದ ಆರಿಸಲಾದ ಹಸುರು ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಕವಿ ಪ್ರೇರಿತರಾಗಿದ್ದಾರೆ. ಕುವೆಂಪು ಅವರ ಸ್ಥಳವಾದ ಮಲೆನಾಡಿನ ಕುಪ್ಪಳಿಯ ಕವಿಶೈಲದಲ್ಲಿ ಅವರಿಗುಂಟಾದ ಸೌಂದರ್ಯಾನುಭವ ,ಪ್ರಕೃತಿ ,ಅಲ್ಲಿಯ ಹಸುರುಗಳೊಂದಿಗೆ ಕುವೆಂಪುರವರಿಗೆ ಅವಿನಾಭಾವ ಸಂಬಂಧವಿದೆ. ಸಸ್ಯ ಸಮೃದ್ಧಿಯ ಹಸುರೇ ಆಕಾಶ ,ಗದ್ದೆ,ಬಯಲು, ಸಂಜೆ ಹೂಗಂಪು ,ಹಕ್ಕಿಯ ದನಿ ,ಕಡಲಿನವರೆಗೂ ವ್ಯಾಪಿಸುವ ಮಟ್ಟಿಗೆ ಕವಿಯು ತಾನು ಹಸಿರಿನಲ್ಲಿ ತಲ್ಲೀನರಾಗಿರುವ ಬಗೆಯನ್ನು ವರ್ಣಿಸುವಾಗ ಮೇಲಿನಂತೆ ಹೇಳಿದ್ದಾರೆ. ಮೇಲಿನ ಮಾತು ಸ್ವಾರಸ್ಯ : ಕವಿಯು ಹಸುರಿನಲ್ಲಿ ತಾದಾತ್ಮ್ಯ ಅನುಭೂತಿಯ ಶಿಖರ ಹೊಂದಿದ್ದನ್ನು ಮೇಲಿನ ವಾಕ್ಯವು ಸ್ಪಷ್ಟಪಡಿಸುತ್ತದೆ.

೨. "ಬೇರೆ ಬಣ್ಣವನೆ ಕಾಣೆ "

ಉ: ಈ ಮೇಲಿನ ವಾಕ್ಯವನ್ನು ಕುವೆಂಪುರವರು ಬರೆದ ಪಕ್ಷಿಕಾಶಿ ಕವನ ಸಂಕಲನದಿಂದ ಆರಿಸಲಾದ ಹಸುರು ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಆಶ್ವಯುಜ ಮಾಸದ ನವರಾತ್ರಿಯಲ್ಲಿ ಮಲೆನಾಡಿನ ಭರ್ತಿ ತುಂಬಿದ ಹಸುರು ಎಲ್ಲೆಡೆಯೂ ಹಸುರು ವಾತಾವರಣವನ್ನು ಸೃಷ್ಟಿ ಮಾಡಿದೆ.ಗದ್ದೆ ,ಬಯಲು, ಮಲೆ,ಕಣಿವೆ ಇರಲಿ ಸಂಜೆ ಬಿಸಿಲು ಕೂಡ ಕವಿಗೆ ಹಸುರಾಗಿ ಕಾಣುತ್ತದೆ. ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಗಿಳಿ ಹಸುರಿನಂತಿದೆ. ಹುಲ್ಲು ಹಾಸು ಪಚ್ಚೆಯ

ಜಮಖಾನೆಯಂತಿದೆ.ಭೂಮಿಯು ಹಸುರಿನಿಂದ ಮೈ ಮುಚ್ಚಿ ಬೇರೆ ಯಾವುದೇ ಬಣ್ಣವನ್ನು ಕಾಣಲು ಆಗದು ಎಂದು ಕವಿ ವರ್ಣಿಸಿದ್ದಾರೆ.

ಸ್ವಾರಸ್ಯ : ಕುವೆಂಪು ಅವರ ಪ್ರಕೃತಿ ತನ್ಮಯತೆಯನ್ನು ಕವಿ ಮತ್ತು ಪ್ರಕೃತಿ ಒಂದಾಗುವ ಅವರು ಮಲೆನಾಡಿನ ಪ್ರಕೃತಿ ಹಸುರುಗಳೊಂದಿಗೆ ಹೊಂದಿದ್ದ ಸಂಬಂಧವನ್ನು ಮೇಲಿನ ವಾಕ್ಯವು ಸೂಚಿಸುವುದು.

೩. "ಹಸುರು ಹಸುರಿಳೆಯುಸಿರೂ"

ಉ: ಈ ಮೇಲಿನ ವಾಕ್ಯವನ್ನು ಕುವೆಂಪುರವರು ಬರೆದ ಪಕ್ಷಿಕಾಶಿ ಕವನ ಸಂಕಲನದಿಂದ ಆರಿಸಲಾದ ಹಸುರು ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಕವಿಗೆ ಹಸುರು ಹೂವಿನ ಕಂಪಿನ ಹಸುರಾಗಿ ,ಗಾಳಿಯ ತಂಪಿನ ಹಸುರಾಗಿ ,ಹಕ್ಕಿಯ ಕೊರಲಿಂಪಿನ ಹಸುರಾಗಿ ,ಇಳೆಯ ಉಸಿರಿನ ಹಸುರಾಗಿ ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂದು ವರ್ಣಿಸುವಾಗ ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಕವಿಗೆ ಎಲ್ಲಿ ನೋಡಿದರೂ ಹಸುರೇ ಕಾಣುವ ಬಗೆಯನ್ನು ಹಸುರಿನಿಂದ ಕವಿ ಪ್ರೇರಿತರಾಗಿರುವ ಬಗೆಯನ್ನೂ ಕವಿಯ ರಸಾಸ್ವಾದನೆಯನ್ನೂ ಮೇಲಿನ ವಾಕ್ಯವು ಸ್ಪಷ್ಟಪಡಿಸುತ್ತದೆ.

೪. " ಹಸುರತ್ತಲ್ ,ಹಸುರಿತ್ತಲ್ ,ಹಸುರೆತ್ತಲ್ "

ಉ : ಈ ಮೇಲಿನ ವಾಕ್ಯವನ್ನು ಕುವೆಂಪುರವರು ಬರೆದ ಪಕ್ಷಿಕಾಶಿ ಕವನ ಸಂಕಲನದಿಂದ ಆರಿಸಲಾದ ಹಸುರು ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಹಸುರು ಕವನದಲ್ಲಿ ಹಸುರು ಪದವು ಮತ್ತೆ ಮತ್ತೆ ಕವನದಲ್ಲಿ ಪುನರಾವರ್ತಿತವಾಗಿ ಜಪಿಸಲ್ಪಟ್ಟು ಹಸುರಿನ ವಾತಾವರಣ ನಿರ್ಮಿತವಾಗಿದೆ. ಎತ್ತೆತ್ತಲೂ ಹಸುರನ್ನೇ ಕಾಣುತ್ತೇವೆ. ಹಸುರಿನಲ್ಲಿಯೇ ಬಾಳುತ್ತೇವೆ .ಹಸುರು ಇಡೀ ಪ್ರಕೃತಿಯನ್ನೇ ಆವರಿಸಿ ಬರು ಬರುತ್ತ ಒಡಲು ಹಸಿರಾಗಿ ,ಹರಿವ ನೆತ್ತರು ಹಸಿರಾಗಿ ,ಆತ್ಮವೂ ಹಸಿರಾಯಿತು ಎಂದು ಕವಿ ವರ್ಣಿಸಿದ್ದಾರೆ.

ಸ್ವಾರಸ್ಯ: ನವರಾತ್ರಿಯ ನವಧಾತ್ರಿಯ ಹಸುರಿನ ಕಡಲಿನಲ್ಲಿ ಕವಿಯ ಆತ್ಮವು ಮಿಂದು ಎಲ್ಲಿ ನೋಡಿದರೂ ಅವರಿಗೆ ಹಸುರೇ ಕಾಣುವ ಬಗೆಯನ್ನು ಮೇಲಿನ ವಾಕ್ಯವು ವಿವರಿಸುತ್ತದೆ.